ಪ-330 (49)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:49ಕ್ಕೆ ಅನುಬಂಧ-1**

**ಯುದ್ಧ ವಿಧವೆಯರಿಗೆ ಮತ್ತು ಯುದ್ಧ ಗಾಯಾಳುಗಳಿಗೆ ರಾಜ್ಯ ಸರ್ಕಾರದಿಂದ ವಿಸ್ತರಿಸಿರುವ ಸೌಲಭ್ಯಗಳು :-**

1. ಯುದ್ಧ ಹಾಗೂ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಯೋಧರ ವಿಧವೆಯರಿಗೆ/ಅವಲಂಬಿತರಿಗೆ ಹಾಗೂ ಶೇಖಡ 50 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆಯನ್ನು ಯುದ್ಧ ಗಾಯಾಳುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ:-

   (ಅ). ಯುದ್ಧ ಹಾಗೂ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ/ ಅವಲಂಬಿತರಿಗೆ ರೂ.5,00,000/- ಗಳನ್ನು ಹಾಗೂ ಶೇಖಡ 51 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆಯನ್ನು ಹೊಂದಿದ್ದಲ್ಲಿ ರೂ.1,00,000/- ಗಳ ಅನುಗ್ರಹ ಪೂರ್ವಕ ಅನುದಾನ ನೀಡಲಾಗುತ್ತಿದೆ.

   @ ಇದಲ್ಲದೇ, ಯುದ್ಧ ಹಾಗೂ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ ಸನ್ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ರೂ.25,00,000 ಗಳ ಅನುಗ್ರಹ ಪೂರ್ವಕ ಅನುದಾನವನ್ನು ಸಹ ದಿನಾಂಕ ಫೆಬ್ರವರಿ 2016 ರಿಂದ ನೀಡಲಾಗುತ್ತಿದೆ.

   (ಅ) ಎರಡು ಎಕರೆ ನೀರಾವರಿ ಅಥವಾ ನಾಲ್ಕು ಎಕರೆ ನೀರಾವರಿಯೇತರ ಅಥವಾ ಎಂಟು ಎಕರೆ ಬರಡು ಜಮೀನು ನೀಡಲಾಗುತ್ತಿದೆ. ಹಂಚಿಕೆಗಾಗಿ ಭೂ ಲಭ್ಯತೆ ಇಲ್ಲದಿದ್ದಲ್ಲಿ ರೂ.10,00,000/- ಗಳ ಅನುದಾನವನ್ನು ಪಡೆಯಲು ಒಪ್ಪಿಕೊಳ್ಳಬಹುದಾಗಿದೆ.

   (ಇ) ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ ರೂ.6,00,000/- ಮತ್ತು ಇತರೆ ಶ್ರೇಣಿಯವರಿಗೆ ರೂ.4,50,000 ಗಳನ್ನು ಮನೆ ಕಟ್ಟಲು ಅನುದಾನವನ್ನು ನೀಡಲಾಗುತ್ತದೆ.

2. ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ ಮತ್ತು ಇತರ ಶ್ರೇಣಿಯವರಿಗೆ 30x40 ಅಡಿಗಳಿಗೆ 40x60 ಅಡಿ ಅಳತೆಯ ಉಚಿತ ನಿವೇಶನವನ್ನು ಮತ್ತು ಯುದ್ಧ ವಿಧವೆಯರಿಗೆ/ಅವಲಂಬಿತರಿಗೆ ನಿವೇಶನದ ಬದಲಿಗೆ ನೀಡಲಾಗುವ ನಗದು ಅನುದಾನದ ವಿವರಗಳು ಈ ಕೆಳಕಂಡಂತಿವೆ:-

| ಪದವಿ | ಬೆಂಗಳೂರು | ಇತರ ಜಿಲ್ಲೆಗಳು |
|---|---|---|
| ಅಧಿಕಾರಿ/ಕಿರಿಯ ಅಧಿಕಾರಿಗಳ ಅವಲಂಭಿತರಿಗೆ | 25,00,000/- | 20,00,000/- |
| ಎನ್‌ಸಿಒ/ಇತರೆ | 20,00,000/- | 15,00,000/- |

3. ಯುದ್ಧ ವಿಧವೆಯರು/ಯುದ್ಧದಲ್ಲಿ ಮಡಿದ ಯೋಧರ ಮಕ್ಕಳಿಗೆ ಉದ್ಯೋಗದಲ್ಲಿ ಮಾಜಿ ಸೈನಿಕರ ಕೋಟಾದಡಿಯಲ್ಲಿ 10% ಮೀಸಲಾತಿ.
4. ಯುದ್ಧ ಹಾಗೂ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ/ ಅವಲಂಬಿತರಿಗೆ ಯುದ್ಧದಲ್ಲಿ ಅಂಗವೈಕಲ್ಯತೆಯನ್ನು ಹೊಂದಿರುವ ಯೋಧರ ಪ್ರತಿ ಹೆಣ್ಣು ಮಕ್ಕಳಿಗೆ ರೂ.1,00,000 ಗಳ ಅನುದಾನವನ್ನು ನೀಡಲಾಗುತ್ತಿದೆ.
5. ಪ್ರತಿ 15 ವರ್ಷಕ್ಕೊಮ್ಮೆ ರೂ.3,00,000 ಗಳನ್ನು ಸ್ವಂತ ಮನೆ ರಿಪೇರಿಗಾಗಿ ನೀಡಲಾಗುತ್ತದೆ.
6. ಸ್ವಂತ ಮನೆಯ ತೆರಿಗೆಯನ್ನು ಮರುಪಾವತಿ ನೀಡಲಾಗುತ್ತದೆ.
7. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರ ವತಿಯಿಂದ ಕರ್ನಾಟಕ ರಾಜ್ಯದೊಳಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ.
8. ಯುದ್ಧ ವಿಧವೆಯರನ್ನು ಅವರ ಅರ್ಹತೆಯ ಆಧಾರದಲ್ಲಿ ಸಹಾನುಭೂತಿ ಪೂರ್ವಕವಾಗಿ ರಾಜ್ಯ ಸರ್ಕಾರದ ಉದ್ಯೋಗಳಿಗೆ ಪರಿಗಣಿಸುವ ಕುರಿತು ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ.

--------------00-----------

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:49ಕ್ಕೆ ಅನುಬಂಧ-2

ಮಾಜಿ ಸೈನಿಕರು ಮತ್ತು ಅವರ ವಿಧವೆಯರಿಗೆ ರಾಜ್ಯ ಸರ್ಕಾರದ ವತಿಯಿಂದ ವಿಸ್ತರಿಸಿರುವ ಸೌಲಭ್ಯಗಳು :-

1. ಆರ್ಥಿಕ ನೆರವು:-

1. ಪ್ರಪಂಚದ 2ನೇ ಮಹಾಯುದ್ಧದಲ್ಲಿ ಸಕ್ರೀಯವಾಗಿ ಭಾಗವಹಿಸಿ ಪಿಂಚಣಿಯಿಲ್ಲದೇ ಬಿಡುಗಡೆಗೊಂಡ ಸೈನಿಕರು ಮತ್ತು ಅವರ ಮರಣಾ ನಂತರ ಅವರ ಪತ್ನಿಯರಿಗೆ ರಾಜ್ಯ ನೀಡಲಾಗುತ್ತಿದ್ದ ಮಾಸಿಕ ಗೌರವಧನದ ಮೊತ್ತ ರೂ.3,000/- ಗಳಿಂದ ರೂ. 6,000/- ಗಳಿಗೆ ಹೆಚ್ಚಿಸಿ ವಿತರಿಸಲಾಗುತ್ತಿದೆ.
2. ಪಿಂಚಣಿಯಿಲ್ಲದೇ ಬಿಡುಗಡೆಗೊಂಡ ಆರ್ಥಿಕ ಸಂಕಷ್ಟದಲ್ಲಿರುವ ಮಾಜಿ ಸೈನಿಕರಿಗೆ ಮತ್ತು ಮರಣಾ ನಂತರ ಅವರ ಪತ್ನಿಯರಿಗೆ ವಾರ್ಷಿಕ ಪರಿಹಾರ ಧನವೆಂದು ರೂ.4,000/- ಗಳನ್ನು ನೀಡಲಾಗುತ್ತಿದೆ.
3. ಮರಣ ಹೊಂದಿರುವ ಮಾಜಿ ಸೈನಿಕರ ಕ್ರಿಯಾವಿಧಿಗಾಗಿ ರೂ.4,000/- ಗಳನ್ನು ಪರಣ ಪರಿಹಾರ ಧನವೆಂದು ನೀಡಲಾಗುತ್ತಿದೆ.
4. ಯುದ್ಧ ಸಂತ್ರಸ್ತರ, ಮಾಜಿ ಸೈನಿಕರ ಹೆಣ್ಣು ಮಗಳ ಮದುವೆಗಾಗಿ ರೂ.5,000/- ಗಳನ್ನು ನೀಡಲಾಗುತ್ತಿದೆ.
5. ಇದಲ್ಲದೇ, ಕನ್ನಡಕ ಅನುದಾನ ರೂ.600/-, ಶ್ರವಣ ಸಾಧನ ರೂ.3,000/-, ಕೃತಕ ದಂತ ಅಳವಡಿಕೆಗಾಗಿ ರೂ.1,000/- ಕಾಂಟ್ಯಾಕ್ಟ್ ಲೆನ್ಸ್ (ಕಣ್ಣಿನ ಮಸೂರ) ರೂ.3,000/- ಹರ್ನಿಯಾ ಬೆಲ್ಟ್ ರೂ.1,500/- ಮತ್ತು ಸಸ್ಪೊಂಡಿಲಿಟಿಸ್ ಕಾಲರ್ ರೂ.1,500/- ಇತರೆ ಸೌಲಭ್ಯಗಳಿಗಾಗಿ ಆರ್ಥಿಕ ಧನ ಸಹಾಯ.
6. ಆರ್ಥಿಕ ಸಂಕಷ್ಟದಲ್ಲಿರುವ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಸ್ಥಳೀಯ ಧನ ಸಹಾಯ.
7. ಪಿಂಚಣಿ ಇಲ್ಲದ ಮಾಜಿ ಸೈನಿಕರಿಗೆ ಗಂಭೀರ ಕಾಯಿಲೆಗಳ ವೈದ್ಯಕೀಯ ಚಿಕಿತ್ಸೆಗಾಗಿ ಸೀಮಿತ ಮೊತ್ತ ರೂ.10,000/- ಗಳವರೆಗೆ ಸೌಲಭ್ಯ.
8. ಪುಣೆಯ ಕಿರ್ಕಿಯಲ್ಲಿರುವ ಪ್ಯಾರಾಲೆಜಿಕ್ ಪುನರ್ವಸತಿ ಕೇಂದ್ರದ ನಿವಾಸಿಗಳಿಗೆ ರೂ.1,00,000/- ಗಳ ಅನುದಾನ.
9. 1978 ಕಿಂತ ಮೊದಲು ಯುದ್ಧದಲ್ಲಿ ನಿಧನರಾದ ಸೈನಿಕರ ವಿಧವೆಯರಿಗೆ ಮಾಸಿಕ ಗೌರವಧನ ರೂ.3,000/-.

2. ಇತರೆ ಸೌಲಭ್ಯಗಳು:-

1. ಮಾಜಿ ಸೈನಿಕರಿಗೆ ರಾಜ್ಯ ಸರ್ಕಾರಿ ಉದ್ಯೋಗದಲ್ಲಿ ಎ.ಬಿ.ಸಿ.ಡಿ ವೃಂದದಲ್ಲಿ ಪಿಂಚಣಿ ಸಹಿತ ಸೇನಾ ಸೇವಾ ಅವಧಿ ಮತ್ತು ಮೂರು ವರ್ಷಗಳ ಹೆಚ್ಚುವರಿ ಅವಧಿಯ ಸೇಪಡೆಯ ವಯೋಮಿತಿ ಸಡಿಲಿಕೆಯೊಂದಿಗೆ 10% ಮೀಸಲಾತಿ.
2. ಆಸ್ತಿ ತೆರಿಗೆಯಲ್ಲಿ 50% ರಿಯಾಯಿತಿ.
3. ಕರ್ನಾಟಕ ರಾಜ್ಯ ಮೂಲ ನಿವಾಸಿಗಳಾದ ಸೈನ್ಯ ಸೇವಾ ನಿರತ/ಮಾಜಿ ಸೈನಿಕ ಸಿಬ್ಬಂದಿಯವರ ಮಕ್ಕಳಿಗೆ ವೃತ್ತಿಪರ ಉನ್ನತ ಶಿಕ್ಷಣದ ಬಿಇ, ಎಂಬಿಬಿಎಸ್, ಆಯುರ್ವೇದ, ಹೋಮಿಯೋಪತಿ, ಯುನಾನಿ ನೇಚುರೋಪತಿ ವಿಭಾಗದಲ್ಲಿ ಶಿಕ್ಷಣ ಪಡೆಯಲು ರಾಜ್ಯ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಅನುಕೂಲಗಳ ಮೀಸಲಾತಿ.
4. ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರಗಳಿಂದ ವಸತಿ ಸ್ಥಳಗಳ ಹಂಚಿಕೆಯಲ್ಲಿ ಮಾಜಿ ಸೈನಿಕರಿಗೆ 10% ಮೀಸಲಾತಿ.
5. ಆದಾಯದ ಮಿತಿ ಹೊರತಾಗಿಯೂ ಸಹ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆಯಾಗುವ ನಿವೇಶನ/ಮನೆಗಳಲ್ಲಿ 1% ರಷ್ಟು ಕರ್ನಾಟಕದ ಮಾಜಿ ಸೈನಿಕರಿಗೆ ಮೀಸಲಾತಿ.
6. ರಾಜ್ಯ ಸರ್ಕಾರಿ ಸೇವೆ ಸಲ್ಲಿಸುತ್ತಿರುವ ಮಾಜಿ ಸೈನಿಕರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಬಂಧನೆಗಳ ಪ್ರಕಾರ ಹಾಗೂ ಕೇಂದ್ರೀಯ ನಾಗರೀಕ ಸೇವಾ ನಿಯಮಾವಳಿ ಪ್ರಕಾರ ಮಿಲಿಟರಿಸೇವೆಗಳ ಅವಧಿ ಮತ್ತು ವೇತನ ನಿಗದಿ ಹಾಗೂ ಸೌಲಭ್ಯಗಳು ಪ್ರಯೋಜನಗಳು.
7. ಬೆಂಗಳೂರು, ಬೆಳಗಾವಿ, ವಿಜಯಪುರ, ದಾರವಾಡ, ಕಾರವಾರ, ಮಡಿಕೇರಿ, ಮೈಸೂರು, ಮಂಗಳೂರು, ಶಿವಮೊಗ್ಗ, ಬಾಗಲಕೋಟೆ ಮತ್ತು ಅಥಣಿ ಪ್ರದೇಶಗಳಲ್ಲಿ ಸೈನಿಕ ಆರಾಮ ಗೃಹಗಳ ಸೌಲಭ್ಯ.
8. ಬೆಳಗಾವಿ, ಅಥಣಿ, ಕಾರವಾರ, ವಿಜಯಪುರ, ಮತ್ತು ಮೈಸೂರು ಪ್ರದೇಶಗಳಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಮಿಲಿಟರಿ ಬಾಲಕರ ವಸತಿ ಗೃಹಗಳ ಸೌಲಭ್ಯ.
9. ದಾರವಾಡದಲ್ಲಿ ಮಾಜಿ ಸೈನಿಕರ ಹೆಣ್ಣು ಮಕ್ಕಳಿಗೆ ಮಿಲಿಟರಿ ಹೆಣು ಮಕ್ಕಳ ವಸತಿ ಗೃಹದಲ್ಲಿ ಉಚಿತ ಸೌಲಭ್ಯ.
10. ರಾಜ್ಯ ಸರ್ಕಾರಿ ಉದ್ಯೋಗದಲ್ಲಿ ಮಾಜಿ ಸೈನಿಕರಿಗೆ 10% ರಷ್ಟು ಇರುವ ಮೀಸಲಾತಿಯ ಸೌಲಭ್ಯಗಳ ಬಗ್ಗೆ ಎಲ್ಲಾ ಇಲಾಖೆಗಳು ತಮ್ಮ ಅಧಿಸೂಚನೆಗಳನ್ನು www.skarnatak.gov.in ನಲ್ಲಿ ಅಳವಡಿಸಲು ಸೂಚಿಸಲಾಗಿದೆ. "ನೇಮಕಾತಿ" ಎಂಬ ಗುರುತಿನ ಚಿನ್ಹೆಯನ್ನು ಮೆನು ಬಾರ್‌ನಲ್ಲಿ ಒದಗಿಸಲಾಗಿದೆ.
11. ಕೆಎಸ್ಐಡಿಸಿ/ಕೆಐಎಡಿ (ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ) ಸಂಸ್ಥೆಯು ಅಭಿವೃದ್ಧಿ ಪಡಿಸುವ ಕೈಗಾರಿಕೆ ವಸಾಹತು/ಪ್ರದೇಶಗಳಲ್ಲಿ ಶೆಡ್ ಮತ್ತು ನಿವೇಶನಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು 2ಎ, ಅಲ್ಪ ಸಂಖ್ಯಾತರಿಗೆ, ಅಂಗವಿಕಲರಿಗೆ ಮತ್ತು ಮಾಜಿ ಸೈನಿಕರಿಗೆ 10% ಮೀಸಲಾತಿ.

------------00------------